ಸಾಗಬೇಕು. ಅನೂಹ್ಯವನ್ನು ಭೇದಿಸಬೇಕು.

ಆದರೆ, ಹೇಗೆ? ನನ್ನ ದಾರಿಗಡ್ಡವಾಗಿ ಸರ್ಪ, ನಾಯಿ, ಬೇತಾಳಗಳಿವೆ. ಅವು ಸಂಕೋಲೆ, ಶಬ್ದ, ಕಾಟಗಳೆಂದು ಕೈಮರಗಳು ಸಾರುತ್ತಿವೆ. ನಾನು ಯೋಚನೆಗೆ ಬಿದ್ದೆ.

ಸರ್ಪ ಮನುಷ್ಯನ ಮೊದಲ ಗುರು. ಆದಿಮಾತೆ, ಆದಿಪಿತನ ಜ್ಞಾನದ ಕಣ್ಣು ತೆರೆಸಿದ್ದೇ ಅದು. ಸರ್ಪ ಹಾಗೆ ಮಾಡದೇ ಇದಿದ್ದರೆ ಆವರಿಬ್ಬರೂ ಇನ್ನೂ ಆ ಉದ್ಯಾನದಲ್ಲೇ ಬೆತ್ತಲೆ ತಿರುಗಿಕೊಂಡಿರುತ್ತಿದ್ದರು. ಛೀ, ಅಸಹ್ಯ! ಅವರಿಗೆ ಹಿಂದಂತೂ ಇರಲಿಲ್ಲ. ಸರ್ಪ ಬುದ್ಧಿ ಹೇಳಿಕೊಡದೇ ಇದ್ದಿದ್ದರೆ ಮುಂದೂ ಮೂಡುತ್ತಿರಲಿಲ್ಲ. ಇಬ್ಬರೇ ಆ ಸೀಮಿತ ಉದ್ಯಾನದಲ್ಲಿ ಬದುಕು ಕಳೆದುಬಿಡುತ್ತಿದ್ದರು. ಉದ್ಯಾನದ ಬೇಲಿಯಾಚೆಗೊಂದು ವಿಶಾಲ ಜಗತ್ತಿದೆ ಎಂದವರಿಗೆ ಎಂದೂ ಗೊತ್ತಾಗುತ್ತಿರಲಿಲ್ಲ. ದುಡಿಮೆಯನ್ನೇ ಅರಿಯದೇ ಸುಮ್ಮನೆ ಉದ್ಯಾನದಲ್ಲಿ ಸಿಕ್ಕಿದ್ದನ್ನೇ ತಿಂದುಕೊಂಡು, ಹೊಸ ಅವಿಷ್ಕಾರದ ಮನೋಭಾವವೇ ಇಲ್ಲದ ಮೊದ್ದುಗಳಾಗಿಯೇ ಇದ್ದುಬಿಡುತ್ತಿದ್ದರು. ಅವರಿಗೆ ಎಲ್ಲ ಅರಿವನ್ನೂ ಮೂಡಿಸಿದ್ದೇ ಸರ್ಪ. ಅದಾದ ಮೇಲೇ ಅವರು ಮಾನ ಮುಚ್ಚಿಕೊಳ್ಳಲು ಅರಿತದ್ದು, ಉದ್ಯಾನದ ಕಂಫರ್ಟ್ ಝೋನ್‌ನಿಂದ ಹೊರಬಿದ್ದು ದುಡಿದು ಬದುಕಲು ಕಲಿತದ್ದು, ಮಕ್ಕಳುಮರಿ ಮಾಡಿಕೊಂಡು ಮಾನವ ಜನಾಂಗ ಬೆಳೆಯಲು ನಾಂದಿ ಹಾಡಿದ್ದು.

ಇನ್ನು ನಾಯಿಯ ಬಗ್ಗೆ ಹೇಳುವುದಾದರೆ ಹನ್ನೊಂದು ಸಾವಿರ ವರ್ಷಗಳ ಹಿಂದೆ ಗೊಬೆಕ್ಲಿ ತೆಪೆಯಲ್ಲಿ ನಮ್ಮ ಪೂರ್ವಜರ ಮನೆಗಳನ್ನು ಕಾಯತೊಡಗಿದ ಅದು ಆಗಿನಿಂದಲೂ ಮನುಷ್ಯನ ವಿಶ್ವಾಸಾರ್ಹ ಸಂಗಾತಿ, ರಕ್ಷಕ. ನಂಬುಗೆಯ ನಾಯಿಯೊಂದು ಜತೆಗಿದ್ದರೆ ಸಾಕು, ಜಗತ್ತಿನ ಯಾವ ಮೂಲೆಗಾದರೂ ಧೈರ್ಯದಿಂದ ನುಗ್ಗಬಹುದು.

ಬೇತಾಳದ ಕಥೆಯಂತೂ ಅದ್ಭುತ. ಅದು ಕಥೆ ಹೇಳಿ ರಂಜಿಸುತ್ತದೆ, ಪ್ರಶ್ನೆ ಕೇಳಿ ಮೆದುಳಿಗೆ ಕೆಲಸ ಕೊಟ್ಟು ಅದನ್ನು ಸದಾ ಹರಿತಗೊಳಿಸುತ್ತಲೇ ಇರುತ್ತದೆ. ಅಷ್ಟೇ ಅಲ್ಲ, ಕರೆದ ಕೂಡಲೇ ಎದುರಿಗೆ ಬಂದು "ಏನಪ್ಪಣೆ?" ಎಂದು ಶಿರಬಾಗಿ ನಿಲ್ಲುತ್ತದೆ. ನನ್ನಾಸೆಗಳನ್ನು ಪೂರೈಸಲು ಸದಾ ತುದಿಗಾಲಿನಲ್ಲಿ ನಿಂತಿರುತ್ತದೆ. ಆಸೆಪಟ್ಟ ಊಟತಿಂಡಿಯನ್ನು ಕ್ಷಣಮಾತ್ರದಲ್ಲಿ ತಂದು ಮುಂದಿಡುತ್ತದೆ, ಬಯಸಿದ ಬಂಗಲೆಯನ್ನು ರಾತ್ರೋರಾತ್ರಿ ಕಟ್ಟಿ ಬೆಳಗಿನ ಜಾವಕ್ಕೆಲ್ಲಾ ಒಕ್ಕಲು ಹೂಡಿಸಿಬಿಡುತ್ತದೆ!

ಮುಂದಿನ ಬೆಟ್ಟದಾಚೆಗಿನ ಅಪರಿಚಿತ ಅನೂಹ್ಯ ದಾರಿಯಲ್ಲಿ ನನ್ನ ಪಯಣವನ್ನು ಸುಗಮ, ಸಂತಸದಾಯಕಗೊಳಿಸುವವು ಇವು ಮೂರೇ. ಸರ್ಪ ಬುದ್ಧಿಬೆಳಕು ನೀಡುತ್ತದೆ. ನಾಯಿ ಅಪಾಯವೆದುರಾದಾಗ ತಾನೇ ಮುಂದಾಗಿ ಹೋರಾಟಕ್ಕಿಳಿಯುತ್ತದೆ. ಈ ಬೇತಾಳವಂತೂ ಹಿಂದಿನ ಆ ಎರಡರಂತೆ ಗಂಡುಗೋವಿಯಲ್ಲ. ಅಪ್ಪಟ ಹೆಣ್ಣು! ನಾ ಬಯಸಿದ ಊಟತಿಂಡಿಯನ್ನು ಇದು ಎಲ್ಲಿಂದಲೋ ಎಗರಿಸಿ ತರುವುದಿಲ್ಲ, ತಾನೇ ಕೈಯಾರೆ ತಯಾರಿಸುತ್ತದೆ, ಅದಕ್ಕೆ ಪ್ರೀತಿ ಬೆರೆಸಿ ಉಣಬಡಿಸುತ್ತದೆ. ನಾ ಹೇಳಿದ ಮನೆಯನ್ನು ಕಟ್ಟಿಕೊಡುವುದಷ್ಟೇ ಅಲ್ಲ, ಮನೆಯೊಡತಿಯಾಗಿ ನನ್ನೊಡನೆ ಬಾಳುವೆ ಮಾಡುತ್ತದೆ. ಈ ಬೇತಾಳ ಬೆಳ್ಳಗಿದೆ ತೆಳ್ಳಗಿದೆ. ಇದರ ಸ್ವರವೂ ಖಂಡಿತಾ ಇಂಪಾಗಿಯೇ ಇರುತ್ತದೆ.

ಆದರೆ, ಕೈಮರಗಳು ಬೇರೆಯೇ ಹೇಳುತ್ತಿವೆಯಲ್ಲ?

ನಾನು ಮತ್ತೆ ಯೋಚನೆಗೆ ಬಿದ್ದೆ,

ಆಳವಾಗಿ. ನಿಧಾನವಾಗಿ ಅರಿವು ನಿಚ್ಚಳಗೊಳ್ಳತೊಡಗಿತು. ಅಕ್ಷರಗಳು ಮೋಡಿ ಮಾಡುತ್ತವೆ. ಅವೆಂದೂ ಪೂರ್ಣ ಸತ್ಯವನ್ನು ಹೇಳುವುದಿಲ್ಲ. ನನ್ನ ಕಣ್ಣ ಮುಂದಣ ವಾಸ್ತವವನ್ನು ಮನುಕುಲದ ಹಿಂದಣ ಅನುಭವಗಳೊಂದಿಗೆ ಮೇಳವಿಸಿ ಮುಂದಿನ ದಾರಿಯನ್ನು ನಾನು ಕಂಡುಕೊಳ್ಳಬೇಕು. ಯಾರೋ ಎಂದೋ ಯಾವ ಉದ್ದೇಶದಿಂದಲೋ ಬರೆದಿಟ್ಟುಹೋದ ಅಕ್ಷರಗಳನ್ನು ನಂಬಿ ಕಣ್ಣ ಮುಂದೆ ಥಾಳಾಗಿ ತೆರೆದಿರುವ ಬದುಕಿನ ಭಾಗ್ಯದ ಬಾಗಿಲಿಗೆ ಬೆನ್ನು ಹಾಕಿ ಮೂರ್ಖ ನಾನಾಗಬಾರದು. ಇವೆಲ್ಲವೂ ಒಟ್ಟಿಗೇ ನನಗೆದುರಾಗಿರುವುದರಲ್ಲಿ ಅರ್ಥವಿದೆ. ದಾರಿಯಲ್ಲಿ ಕಂಡಿದ್ದ ಮುದುಕಿಯ ವಿಗ್ರಹ ಹೇಳಿದಂತೆ ಇವೆಲ್ಲವೂ ಪೂರ್ವಜನ್ಮಗಳಲ್ಲಿ ನಾನು ಸಂಪಾದಿಸಿಟ್ಟುಕೊಂಡಿದ್ದ ಬೀಜಗಳು. ಈ ಸತ್ಯ ನನಗೆ ಹೊಳೆಯಲು ಇಷ್ಟು ತಡವಾದುದೇಕೆ? ಇರಲಿ, ಇನ್ನು ತಡ ಮಾಡುವುದು ಬೇಡ. ಬೀಜಗಳನ್ನೀಗ ಮೊಳಕೆಯೊಡೆಯಿಸಬೇಕು, ಬದುಕನ್ನು ಹುಡುಕಿಕೊಳ್ಳಬೇಕು.